ಸ-330 (100)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರವಿಕುಮಾರ್ ಎನ್, ಶ್ರೀ ಮುನಿರಾಜುಗೌಡ, ಶ್ರೀ ಎಸ ವಿ ಸುಂಕನೂರ, ಶ್ರೀ ಪ್ರತಾಪ್ ಸಿಂಹ ನಾಯಕ್ ಹಾಗೂ ಇತರರು ನಿಯಮ 330ರಡಿಯಲ್ಲಿ "ದೇವಸ್ಥಾನಗಳಿಗೆ ದಾನ ಮಾಡಿದ ಭೂಮಿಯನ್ನು ಅಕ್ರಮವಾಗಿ ಒತ್ತುವರಿ ಮಾಡಿ ಪರಭಾರೆ ಮಾಡುತ್ತಿರುವುದರಿಂದ ದೇವಸ್ಥಾನದ ಭೂಮಿಯನ್ನು ದೇವಸ್ಥಾನದ ಹೆಸರಿನಲ್ಲಿಯೇ ಖಾತೆ ಹಾಗೂ ಪಹಣಿಯಲ್ಲಿ ದಾಖಲಿಸುವಂತೆ ಕಾನೂನಿಗೆ ತಿದ್ದುಪಡಿ ತರುವ ಕುರಿತು" ಗಮನ ಸೆಳೆಯುವ ಸೂಚನೆಗೆ ಮುಜರಾಯಿ ಹಜ್ ಹಾಗೂ ವಕ್ಫ್ ಸಚಿವರ ಹೇಳಿಕೆ :-**

## ಉತ್ತರ:-

ಧಾರ್ಮಿಕ ದತ್ತಿ ಇಲಾಖೆಯ ಅಧೀನದಲ್ಲಿ ಪ್ರಸ್ತುತ 34563 ಅಧಿಸೂಚಿತ ಸಂಸ್ಥೆ/ದೇವಸ್ಥಾನಗಳಿದ್ದು, ಈ ದೇವಾಲಯಗಳ ಪೈಕಿ ಪ್ರವರ್ಗ "ಎ" 205 ದೇವಾಲಯಗಳು , ಪ್ರವರ್ಗ " ಬಿ" 139 ದೇವಾಲಯಗಳು ಮತ್ತು ಪ್ರವರ್ಗ "ಸಿ"-34219 ದೇವಾಲಯಗಳಿದ್ದು ಇವುಗಳಲ್ಲಿ ಬಹುತೇಕ ದೇವಸ್ಥಾನಗಳ ಭೂಮಿಯ ಪರಭಾರೆ ಪ್ರಕರಣಗಳು ಪ್ರವರ್ಗ "ಬಿ" ಮತ್ತು "ಸಿ" ದೇವಾಲಯಗಳಿಗೆ ಸಂಬಂಧಿಸಿದಾಗಿದ್ದು, ಇವುಗಳ ಮೇಲ್ವಿಚಾರಣೆಯು ಕ್ರಮವಾಗಿ ಸಂಬಂದಪಟ್ಟ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಹಾಗೂ ತಾಲ್ಲೂಕು ತಹಶೀಲ್ದಾರ್ ಗಳ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ದೇವಸ್ಥಾನಗಳ ಬಹುತೇಕ ಜಮೀನುಗಳನ್ನು

A) ಮೈಸೂರು (ಧರ್ಮಾದಾಯ ಮತ್ತು ದತ್ತಿ) ಇನಾಂ ರದ್ದತಿ ಕಾಯ್ದೆ 1955
B) ಕರ್ನಾಟಕ ವಿವಿಧ ಇನಾಂ (ರದ್ದಿಯಾತಿ) ಕಾಯ್ದೆ 1977
C) ಕರ್ನಾಟಕ ಸಂಡೂರು ಪ್ರದೇಶ ಇನಾಂ (ರದ್ದಿಯಾತಿ) ಕಾಯ್ದೆ 1976
D) ಕರ್ನಾಟಕ( ಬೆಳಗಾಂ ಮತ್ತು ಕಲಬುರಗಿ ಪ್ರದೇಶ) (ಧರ್ಮಾದಾಯ ಮತ್ತು ದತ್ತಿ) ಇನಾಂ ರದ್ದತಿ ಕಾಯ್ದೆ 1973
E) ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961
F) ರೇಣುಕಾ ಎಲ್ಲಮ್ಮ ದೇವಸ್ಥಾನ(ಆಡಳಿತ) ಅಧಿನಿಯಮ, 1974

ಈ ಮೇಲ್ಕಂಡ ಕಾಯ್ದೆಗಳಡಿಯಲ್ಲಿ ಭೂ ನ್ಯಾಯಮಂಡಳಿಗಳ ಆದೇಶಗಳನ್ವಯ (ಅಧಿಬೋಗದಾರಿಕೆ ಹಕ್ಕಿನ ಮಂಜೂರಾತಿ) ಪರಭಾರೆಗಳಾಗಿರುತ್ತದೆ. ಹಾಗೂ ಕೆಲವು ಜಮೀನುಗಳು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ಕಲಂ 62 ಹಾಗೂ ನಿಯಮ 2002ರ ನಿಯಮ 28ರಡಿಯಲ್ಲಿ ಮತ್ತು ಸದರಿ ಕಾಯ್ದೆ ಬರುವ ಪೂರ್ವದಲ್ಲಿದ್ದ ಕಲಂ 23ರಡಿಯಲ್ಲಿನ ಉಪ ಕಲಂ (ಬಿ) (ಸಿ) (ಡಿ) ( ಇ ) ಮತ್ತು (ಎಫ್) ಕಾಯ್ದೆಗಳಡಿಯಲ್ಲಿಯೂ ಸಹ ಜಮೀನುಗಳನ್ನು ಪರಭಾರೆ ಮಾಡಬಹುದಾಗಿರುತ್ತದೆ. ಮುಂದುವರೆದು ಭೂಸ್ವಾಧೀನ ಕಾಯ್ದೆ 1891 ಹಾಗೂ ಭೂ ಆರ್ಜನೆಯಲ್ಲಿ ಯೋಗ್ಯ ಪರಿಹಾರ ಮತ್ತು ಪಾರದರ್ಶಕತೆ ಹಾಗೂ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗೆ ಅಧಿಕಾರ ಅಧಿನಿಯಮ, 2013ರ (ಕೇಂದ್ರ ಅಧಿನಿಯಮ ಸಂಖ್ಯೆ:30)ರಡಿಯಲ್ಲಿಯೂ ಸಹ ದೇವಾಲಯದ ಜಮೀನನ್ನು ಭೂಸ್ವಾಧೀನ, ಪರಭಾರೆ ಪಡಿಸಿಕೊಳ್ಳಲಾಗಿರುತ್ತದೆ. ಈ ರೀತಿ ಭೂ-ಸ್ವಾಧೀನ ಪಡಿಸಿಕೊಳ್ಳಲಾದ ಜಮೀನುಗಳಲ್ಲಿ ದೇವಾಲಯಗಳಿಗೆ ದಾನ ಮಾಡಿದ ಭೂಮಿಗಳು ಸಹ ಸೇರಿರುವುದಾಗಿರುತ್ತದೆ.

.....2

ಅಧಿಸೂಚಿತ ದೇವಾಲಯಗಳಿಗೆ ದಾನ ಮಾಡಿದ ಭೂಮಿಯನ್ನು ಅಕ್ರಮವಾಗಿ ಒತ್ತುವರಿ ಮಾಡಿ ಪರಭಾರೆ ಮಾಡುತ್ತಿರುವ ಪ್ರಕರಣಗಳು ಕಂಡು ಬಂದಲ್ಲಿ ಅಂತಹ ಅಕ್ರಮ ಒತ್ತುವರಿಯನ್ನು ತೆರವುಗೊಳಿಸಲು ಇಲಾಖೆಯಿಂದ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ. ಈ ನಿಟ್ಟಿನಲ್ಲಿ ಅಧಿಸೂಚಿತ ದೇವಾಲಯಗಳ ಸ್ಥಿರಾಸ್ತಿಯ ಸರ್ವೆ ಕಾರ್ಯವನ್ನು ಮಾಡಿ ಜಮೀನುಗಳ ದಾಖಲೆಗಳನ್ನು ನವೀಕರಿಸಿ ನಿರ್ವಹಿಸಲು ತಿಳಿಸಿ ಸರ್ಕಾರದ ಮುಖ್ಯ ಕಾರ್ಯದರ್ಶಿ ರವರು ದಿನಾಂಕ:11.12.2020ರ ಅರೆ ಸರ್ಕಾರಿ ಪತ್ರದಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿರುತ್ತಾರೆ.

ಧಾರ್ಮಿಕ ದತ್ತಿ ಆಯುಕ್ತರ ಪತ್ರ ದಿನಾಂಕ:21.10.2020ರಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಬರೆಯಲಾದ ಪತ್ರದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ದೇವಾಲಯಗಳು, ಛತ್ರಗಳು ಹಾಗೂ ಒಟ್ಟಾರೆ ಇಲಾಖೆಗೆ ಸೇರಿದ ಜಮೀನುಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ನವೀಕರಿಸಿಕೊಂಡು ನಿರ್ವಹಿಸಬೇಕಾದ ಕುರಿತು ಕಂದಾಯ ವಿಭಾಗ ಮತ್ತು ತಾಲ್ಲೂಕು ಮಟ್ಟದಲ್ಲಿ ಕೆಲಸ ನಿರ್ವಹಿಸುತ್ತಿರುವ ಧಾರ್ಮಿಕ ದತ್ತಿ ಇಲಾಖೆ, ಕಂದಾಯ ಇಲಾಖೆ ಹಾಗೂ ಭೂ ಮಾಪನಗಳ ಸಿಬ್ಬಂದಿ ಹಾಗೂ ಅಧಿಕಾರಿಗಳ ಮಟ್ಟದಲ್ಲಿ ಅಗತ್ಯ ನಡವಳಿಗಳ ಮುಖಾಂತರ ಅಧಿಸೂಚಿತ ದೇವಾಲಯಗಳ ಅಂತಿಮ ಕಂದಾಯ ದಾಖಲೆಗಳನ್ನು ತಯಾರಿಸಿ ನಿರ್ವಹಿಸುವ ಬಗ್ಗೆ ಕರ್ನಾಟಕ ಭೂ ಕಂದಾಯ ಅಧಿನಿಯಮ-1964 ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ-1997 ಇವುಗಳಲ್ಲಿ ಸೂಚಿತವಾಗಿರುವ ಅನ್ವಯವಾಗುವ ಅಧಿನಿಯಮ ಮತ್ತು ನಿಯಮಗಳ ಅನುಸಾರ ಕೆಲಸ ನಿರ್ವಹಿಸತಕ್ಕದ್ದು. ಅಂತಿಮ ದಾಖಲೆಗಳು ತಯಾರಾದ ನಂತರ ಅವುಗಳ ಪ್ರತಿಯನ್ನು ಆಯುಕ್ತರ ಕಛೇರಿಯ ದತ್ತಿ ಸಮೀಕ್ಷಾಧಿಕಾರಿಗಳಿಗೆ ಕಡ್ಡಾಯವಾಗಿ ಕಳುಹಿಸುವುದು ಎಂಬುದಾಗಿ ತಿಳಿಸಲಾಗಿರುತ್ತದೆ.

ಮಾನ್ಯ ಧಾರ್ಮಿಕ ದತ್ತಿ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:16.11.2021ರಲ್ಲಿ ನಡೆದ ಸಭೆಯಲ್ಲಿ ಎಲ್ಲಾ ದೇವಾಲಯಗಳ ಸಂಬಂಧಪಟ್ಟ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಇಲಾಖಾ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ದೇವಾಲಯಗಳ ಆಸ್ತಿಗಳ ಸರ್ವೆಕಾರ್ಯಗಳನ್ನು ಕೈಗೊಂಡು, ಹದ್ದುಬಸ್ತು ಗುರುತಿಸಿ, ಆರ್.ಟಿ.ಸಿ.ಯಲ್ಲಿ ದೇವಾಲಯದ ಹೆಸರನ್ನು ದಾಖಲಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿ ಮುಂದಿನ ಸಭೆಗೆ ಪ್ರಗತಿ ವರದಿಯನ್ನು ಕಡ್ಡಾಯವಾಗಿ ಸಲ್ಲಿಸಲು ನಿರ್ದೇಶನವನ್ನು ನೀಡಿ, ಈಗಾಗಲೇ ಸರ್ವೆ ಕಾರ್ಯ ಮುಗಿದ ಹಾಗೂ ಒತ್ತುವರಿ ಕಂಡು ಬಂದಿರುವ ದೇವಾಲಯಗಳ ಸ್ವತ್ತುಗಳ ಒತ್ತುವರಿಗಳನ್ನು ತೆರವುಗೊಳಿಸಲು ನಿಯಮಾನುಸಾರ ತ್ವರಿತ ಕ್ರಮಗಳನ್ನು ಶೀಘ್ರವಾಗಿ ಕೈಗೊಳ್ಳಲು ಸೂಚನೆಯನ್ನು ನೀಡಿರುತ್ತಾರೆ.

**ದಿನಾಂಕ:16.11.2021ರ ಈಚೆಗೆ ಮುಜರಾಯಿ ದೇವಾಲಯಗಳ ಅಳತೆ ಹಾಗೂ ಒತ್ತುವರಿ ತೆರವುಗೊಳಿಸುವ ನಿಟ್ಟಿನಲ್ಲಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.**

1. ದಿನಾಂಕ:16.11.2021ರಂದು ನಡೆದ ಸಭೆಯಲ್ಲಿ ರಾಜ್ಯದ ಎಲ್ಲಾ ಮುಜರಾಯಿ 'ಎ'ಮತ್ತು 'ಬಿ' ಪ್ರವರ್ಗದ ದೇವಾಲಯಗಳ ಅಳತೆ ಬಗ್ಗೆ ಭೂದಾಖಲೆಗಳ ಇಲಾಖೆಯ ನಿಯಮಾನುಸಾರ. ಅರ್ಜಿಸಲ್ಲಿಸಲು ಹಾಗೂ ಇಗಾಗಲೇ ಅಳತೆಯಾಗಿದ್ದಲ್ಲಿ ಒತ್ತುವರಿ ತೆರವು ಗೊಳಿಸಿ ಕೈಗೊಂಡ ಕ್ರಮದ ಬಗ್ಗೆ ವರದಿ ಸಲ್ಲಿಸಲು ಕೋರಿ ದಿನಾಂಕ:17.11.2021 ಹಾಗೂ 24.11.2021ರಂದು ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಲಾಯಿತು.

....3

2. ಪತ್ರಕ್ಕೆ ಸ್ಪಂದಿಸಿ 38 ಅಧಿಕಾರಿಗಳು ಉತ್ತರ ಸಲ್ಲಿಸಿದ್ದು ಅವುಗಳನ್ನು ಪರಿಶೀಲಿಸಿ ಈ ಕೆಳಗಿನಂತೆ ಪ್ರತ್ಯೇಕ ವಿವರವಾದ ಮಾರ್ಗದರ್ಶನ ನೀಡಲಾಗಿದೆ.

- ದೇವರ ಹೆಸರಿನಲ್ಲಿ ಪಹಣಿಗಳು ಇರದ ಜಾಗಗಳಿಗೆ ದೇವರ ಹೆಸರಿನಲ್ಲಿ ಪಹಣಿ ಮಾಡಿಸಲು ತಹಶೀಲ್ದಾರ್ ರವರುಗಳಿಗೆ ಮನವಿ ಸಲ್ಲಿಸಲು ಕೋರಲಾಗಿದೆ.
- ಈಗಾಗಲೇ ಅಳತೆಗೆ ಅರ್ಜಿ ಸಲ್ಲಿಸಲಾಗಿದೆ ಎನ್ನಲಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಶೀಘ್ರ ಕ್ರಮ ಕೈಗೊಳ್ಳಲು ಕೋರಿ ಸಂಬಂಧಪಟ್ಟ ಭೂದಾಖಲೆಗಳ ಇಲಾಖಾ ಅಧಿಕಾರಿಗಳಾದ ಆಯುಕ್ತರು, ಉಪನಿರ್ದೇಶಕರು ಹಾಗೂ ಸಹಾಯಕ ನಿರ್ದೇಶಕರುಗಳಿಗೆ ಪತ್ರ ಬರೆಯಲಾಗಿದೆ.
- ಒತ್ತುವರಿ ಗುರುತಿಸಿರುವ ಪ್ರದೇಶದಲ್ಲಿ ಒತ್ತುವರಿ ಖುಲ್ಲಾಪಡಿಸಲು ಕೋರಿ ಸಂಬಂಧಪಟ್ಟ ತಹಶೀಲ್ದಾರ್ ರವರುಗಳಿಗೆ ಮನವಿ ಸಲ್ಲಿಸಿ ಕ್ರಮಕೈಗೊಳ್ಳಲು ತಿಳಿಸಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಿರ್ದೇಶನನೀಡಲಾಗಿದೆ.

3. ರಾಜ್ಯದ ಎಲ್ಲಾ 227 ತಹಶೀಲ್ದಾರರುಗಳಿಗೆ ಪ್ರತ್ಯೇಕ ಪತ್ರಗಳನ್ನು ಬರೆದು 'ಸಿ' ದರ್ಜೆಯ ದೇವಾಲಯಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಕ್ರಮಕೈಗೊಳ್ಳಲು ಕೋರಲಾಗಿದೆ.

- ಅವರ ಕಾರ್ಯವ್ಯಾಪ್ತಿಯಲ್ಲಿ ಇರುವ ಎಲ್ಲಾ ದೇವಾಲಯಗಳಿಗೆ ಸಂಬಂಧಿಸಿದ ಜಮೀನುಗಳ ಬಾಬ್ತು ಪಹಣಿಗಳು ದೇವರ ಹೆಸರಿನಲ್ಲಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.
- ಇಲ್ಲವಾದಲ್ಲಿ ದೇವರ ಹೆಸರಿಗೆ ಪಹಣಿ ಮಾಡುವ ಬಗ್ಗೆ ಆದ್ಯತೆ ಮೇರೆಗೆ ನಿಯಮಾನುಸಾರ ಕ್ರಮ ಗೊಳ್ಳುವುದು.
- "ಸಿ-ಪ್ರವರ್ಗದ ದೇವಾಲಯಗಳಿಗೆ ತಹಶೀಲ್ದಾರ್ ರವರುಗಳೇ ಕಾರ್ಯನಿರ್ವಾಹಣಾ ಅಧಿಕಾರಿಗಳಾಗಿರುವುದರಿಂದ ಇಂತಹ ದೇವಾಲಯಗಳ ಜಮೀನುಗಳಿಗೆ ಸಂಬಂಧಿಸಿದ ಪಹಣಿಗಳನ್ನು ಲಗತ್ತಿಸಿ, ಅಳತೆ ಬಗ್ಗೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಪ್ರಸ್ತಾವನೆ ಕಳುಹಿಸುವುದು.
- "ಎ" ಮತ್ತು "ಬಿ" ಶ್ರೇಣಿಯ ದೇವಾಲಯಗಳ ಬಾಬ್ತು ಸಂಬಂಧಿಸಿದ ಕಾರ್ಯನಿರ್ವಾಹಣಾಧಿಕಾರಿಗಳೊಂದಿಗೆ ಸಭೆ ನಡೆಸಿ, ಪಹಣಿಯನ್ನು ದೇವಾಲಯದ ಹೆಸರಿಗೆ ಇರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು ಹಾಗೂ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ರವರಿಗೆ ಅಳತೆ ಬಗ್ಗೆ ಅರ್ಜಿ ಸಲ್ಲಿಸಲು ಸೂಕ್ತ ಕ್ರಮ ವಹಿಸಲು ಕೋರಿದೆ.

ತಹಶೀಲ್ದಾರ್ ರವರುಗಳು ಈ ಮೇಲೆ ತಿಳಿಸಿರುವಂತೆ ಕ್ರಮಕೈಗೊಂಡು ವರದಿ ಸಲ್ಲಿಸಿದ ಕೂಡಲೇ ಅಳತೆ ಕೆಲಸದ ಬಗ್ಗೆ ಭೂದಾಖಲೆಗಳ ಇಲಾಖಾಧಿಕಾರಿಗಳೊಂದಿಗೆ ಪತ್ರ ವ್ಯವಹಾರ ನಡೆಸಿ ಕ್ರಮ ಕೈಗೊಳ್ಳಲಾಗುವುದು.

4. ಪ್ರಸ್ತುತ ಇಲಾಖೆಗೆ ಯಾವುದೇ ಭೂಮಾಪಕರನ್ನು ನಿಯೋಜಿಸಿರುವುದಿಲ್ಲ. ಈ ಹಿಂದೆ ನಿಯೋಜಿತರಾಗಿದ್ದ ಭೂಮಾಪಕರುಗಳು ಸುಮಾರು 262 ದೇವಾಲಯಗಳ ಆಸ್ತಿಗಳನ್ನು ಅಳತೆ ಮಾಡಿ ಗುರುತಿಸಿರುವ ಒತ್ತುವರಿಯನ್ನು ಖುಲ್ಲಾಪಡಿಸುವ ಬಗ್ಗೆ ಆದ್ಯತೆಯ ಮೇರೆಗೆ ಕ್ರಮಕೈಗೊಳ್ಳಲಾಗುತ್ತಿದೆ.

(ಕಂಇ 282 ಮುಸಪ್ರ 2021)

(ಶಶಿಕಲಾ. ಅ. ಜೊಲ್ಲೆ)
ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು.

Scanned with CamScanner